2. ಸಿವಿಲ್ ನ್ಯಾಯಾಲಯ ಮತ್ತು ಭೂ ಸುಧಾರಣೆ ಟ್ರಿಬುನಲ್ ನ್ಯಾಯಾಲಯದಲ್ಲಿ ತೀರ್ಮಾನವಾಗಿರುತ್ತದೆ. ಆದ್ದರಿಂದ ಅನಧಿಕೃತ ಕಟ್ಟಡಗಳನ್ನು ಕಟ್ಟಿರುವ ವ್ಯಕ್ತಿಗಳನ್ನು ತೆರವುಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರವು ರೋರಿಕೆ ಎಸ್ಟೇಟ್ ಅನ್ನು ಅಲಕ್ಷ ಮಾಡುತ್ತಿರುವುದು

879 (1137) - ಶ್ರೀ ಕೈಲಾಸ್‌ನಾಥ್ ಪಾಟೀಲ್ (ಚಿಂಚೋಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸರಕಾರವು ರೋರಿಕೆ ಎಸ್ಟೇಟ್ ಅನ್ನು ಅಲಕ್ಷ ಮಾಡುತ್ತಿರುವುದು ಸತ್ಯವೇ?

ಆ. ಹಾಗಿದ್ದರೆ ಎಸ್ಟೇಟನ್ನು ಬೆಂಗಳೂರಿನ ಮತ್ತೊಂದು ಪ್ರವಾಸೀ ತಾಣವನ್ನಾಗಿ ಪರಿವರ್ತಿಸಲು ಸರಕಾರದ ನಿಲುವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. ರೋರಿಕೆ ಮತ್ತು ದೇವಿಕಾರಾಣಿ ಎಸ್ಟೇಟ್ (ಅರ್ಜನ ಮತ್ತು ವರ್ಗಾವಣೆ) ಅಧಿನಿಯಮ 1996ರ ಪ್ರಕಾರ, ಸರ್ಕಾರದ ಅಧಿಸೂಚನೆದನ್ವಯ ರೋರಿಕೆ ಎಸ್ಟೇಟನ್ನು ಸರಕಾರದ ವಶಕ್ಕೆ ಪಡೆದುಕೊಳ್ಳಲಾಗಿರುತ್ತೆ. ಮಾನ್ಯ ಉಚ್ಚ ನ್ಯಾಯಾಲಯ ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದು ದಿನಾಂಕ 16-7-2002 ರಂದು ಮಾನ್ಯ ಉಚ್ಚ ನ್ಯಾಯಾಲಯದಿಂದ ತೀರ್ಪು ಪ್ರಕಟಣೆಗೊಂಡಿರುತ್ತದೆ. ರೋರಿಕೆ ಎಸ್ಟೇಟನ್ನು ಅಭಿವೃದ್ಧಿ ಪಡಿಸುವ ಮೊದಲನೇ ಹಂತವಾಗಿ ರೋರಿಕೆ ಮತ್ತು ದೇವಿಕಾರಾಣಿರವರಿಗೆ ಸಮಾಧಿ ಕಟ್ಟುವ ಕಾರ್ಯ ನಡೆಯುತ್ತಿರುತ್ತದೆ.

ಆ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಸಲುವಾಗಿ ಆದ ಖರ್ಚು

880 (1555) - ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗಡಿ ಪ್ರದೇಶಾಭಿವೃದ್ಧಿ ಸಲುವಾಗಿ ರಾಜ್ಯದಲ್ಲಿ ಇಲ್ಲಿಯವರೆಗೆ ಆದ ಖರ್ಚು ಎಷ್ಟು?

ಆ. ಆ ಪೈಕಿ ಚಿಂಚೊಳಿ ತಾಲ್ಲೂಕಿಗೆ ಒದಗಿಸಿದ ಹಣ ಎಷ್ಟು?

ಶ್ರೀ ಆರ್.ಬಿ. ತಿಮ್ಮಾಪುರ್ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ. ರೂ. 99.98 ಕೋಟಿ

ಆ. ರೂ. 2.88 ಕೋಟಿ

ಚಿಂಚೋಳಿ ಮತಕ್ಷೇತ್ರದ ಜಿಲ್ಲಾ ಮುಖ್ಯ ರಸ್ತೆಗಳ ದುರಸ್ಥಿ

881 (1556) - ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಂಚೋಳಿ ಮತಕ್ಷೇತ್ರದ ಜಿಲ್ಲಾ ಮುಖ್ಯ ರಸ್ತೆಗಳ ದುರಸ್ತಿ ಮತ್ತು 3 ವರ್ಷದ ನಿರ್ವಹಣೆ ಗುತ್ತಿಗೆದಾರರು ಸರಿಯಾಗಿ ಕಾರ್ಯನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಹಾಗಿದ್ದರೆ, ಈ ನಿಟ್ಟಿನಲ್ಲಿ ತೆಗೆದುಕೊಂಡ ಕ್ರಮಗಳೇನು?